ಮತ್ತು ಆಳಂದ ಕೂಡ ಸೇರಿದೆ. ಅಲ್ಲಿಂದ ಅಪ್ರೂವಲ್ ಬಂದ ನಂತರ ಪ್ರಾರಂಭ ಮಾಡುತ್ತೇವೆ.

ಉಪಾಧ್ಯಕ್ಷರು:– ಆಯಿತು ಬಿಡಿ. ಮಾನ್ಯ ಸುರೇಶ್ ಗೌಡರೆ, ಮಾನ್ಯ ಬಿ.ಆರ್. ಪಾಟೀಲ್‌ರವರೇ, ತಮ್ಮ ಸೀಟ್‌ಗಳಿಗೆ ಹೋಗಿ.

(ಈ ಹಂತದಲ್ಲಿ ಮಾನ್ಯ ಸುರೇಶ್ ಗೌಡ ಮತ್ತು ಮಾನ್ಯ ಬಿ.ಆರ್. ಪಾಟೀಲ್‌ರವರು ತಮ್ಮ ಸ್ಥಾನಗಳಿಗೆ ಮರಳಿದರು)

ಶ್ರೀ ಎಸ್.ಆರ್. ವಿಶ್ವನಾಥ್:– ಮಾನ್ಯ ಸಚಿವರೆ, ಉಳಿಕೆ ಇರತಕ್ಕಂಥ ಪಟ್ಟಿಯಲ್ಲಿ ಯಾರ್ಯಾರದು ಇದೆ ಎಂಬುದನ್ನು ಹೇಳಿ. ಅಂದರೆ, 18 ರಲ್ಲಿ ಇನ್ಯಾರದು ಇದೆ ಎಂದು ಹೇಳಿ. ಮಾನ್ಯ ಡಿ.ಕೆ. ಶಿವಕುಮಾರ್‌ರವರು ಬಂಡೆ ಇದ್ದ ಹಾಗೆ. ಆದ್ದರಿಂದ, ಬಂಡೆ ಮೇಲೆ ನಾವು ಬಿದ್ದರೂ ಮತ್ತು ಬಂಡೆ ನಮ್ಮ ಮೇಲೆ ಬಿದ್ದರೂ ಏಟು ಆಗುವುದು ನಮಗೆ.

ಉಪಾಧ್ಯಕ್ಷರು:– ಮುಂದಿನ ಪ್ರಶ್ನೆ ಮಾನ್ಯ ಅಪ್ಪಚ್ಚುರಂಜನ್‌ರವರದ್ದು.

4) **ವಿಷಯ:** ಬಿಸಿಎಂ ಮತ್ತು ಎಸ್‌ಸಿ/ಎಸ್‌ಟಿ ಹಾಸ್ಟೇಲ್‌ಗಳಲ್ಲಿ ವಿದ್ಯಾರ್ಥಿಗಳನ್ನು ಮುಂದುವರಿಸುವ ಬಗ್ಗೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್ (ಮಡಿಕೇರಿ):– ಮಾನ್ಯ ಉಪಾಧ್ಯಕ್ಷರೆ, ಬಡವರ ಮಕ್ಕಳು, ರೈತರ ಮಕ್ಕಳು ಸಾಧಾರಣವಾಗಿ ಬಿಸಿಎಂ ಹಾಸ್ಟಲ್‌ಗಳಿಗೆ ಸೇರುತ್ತಾರೆ. ಮೊದಲ ವರ್ಷದ ಡಿಗ್ರಿಯಲ್ಲಿ ಒಂದು ಅಥವಾ ಎರಡು subject ನಲ್ಲಿ fail ಆದರೆ ಅವರನ್ನು ಹಾಸ್ಟೆಲ್‌ನಿಂದ ವಾಪಸ್ಸು ಕಳುಹಿಸುವಂಥ ವ್ಯವಸ್ಥೆ ನಡೆಯುತ್ತಿದೆ. ಅಲ್ಲಿ ಸಾಧಾರಣವಾಗಿ ಬಡವರ ಮಕ್ಕಳು ಮತ್ತು ಕೂಲಿ ಕಾರ್ಮಿಕರ ಮಕ್ಕಳು ಓದುವುದಕ್ಕೆ ಹೋಗುತ್ತಾರೆ. ವಿಶೇಷವಾಗಿ ಹೆಣ್ಣು ಮಕ್ಕಳ ಹಾಸ್ಟೆಲ್‌ಗಳಲ್ಲಿ first yearನಲ್ಲಿ ಒಂದು subject ನಲ್ಲಿ ಫೇಲ್ ಆಗಿದೆ ಎಂದು ಅವರನ್ನು ವಾಪಸ್ಸು ಕಳುಹಿಸಿದರೆ ಅವರ ಪರಿಸ್ಥಿತಿ ಏನಾಗಬೇಕು? ಇವತ್ತಿನದಿವಸ ಹೆಣ್ಣು ಮಕ್ಕಳು ಹೆಚ್ಚಾಗಿ ಯಾರೂ ಕಾಲೇಜಿಗೆ ಹೋಗುವುದಿಲ್ಲ.

ಆದ್ದರಿಂದ, ಇಂಥ ಸಂದರ್ಭದಲ್ಲಿ ಅಲ್ಲಿಯೇ continue ಮಾಡತಕ್ಕಂಥ ವ್ಯವಸ್ಥೆ ಮಾಡಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ. ಕೊನೇ ಪಕ್ಷ ಒಂದು ಅಥವಾ ಎರಡು subject ಗಳಲ್ಲಿ ಫೇಲ್ ಆದರೂ ಕೂಡ ಅವರನ್ನು continue ಮಾಡಿಸತಕ್ಕಂಥ ಕೆಲಸವನ್ನು ಬಿಸಿಎಂ ಮತ್ತು ಎಸ್‌ಸಿ/ಎಸ್‌ಟಿ ಹಾಸ್ಟೆಲ್‌ಗಳಲ್ಲಿ ಮಾಡಿಸಬೇಕೆಂದು ತಮ್ಮ ಮುಖಾಂತರ ಒತ್ತಾಯ ಮಾಡುತ್ತೇನೆ.

ಶ್ರೀ ಟಿ.ಬಿ. ಜಯಚಂದ್ರ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು):– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಚಿವರ ಕಡೆಯಿಂದ ನಾಳೆ ಈ ವಿಷಯಕ್ಕೆ ಉತ್ತರ ಕೊಡಿಸುತ್ತೇನೆ.

ಶ್ರೀ ಎಂ.ಪಿ. ಅಪ್ಪಚ್ಚು ರಂಜನ್:– ಮಾನ್ಯ ಉಪಾಧ್ಯಕ್ಷರೆ, ಇದು ನಮ್ಮ ಜಿಲ್ಲೆಯಲ್ಲಿರುವ ಸಮಸ್ಯೆ ಅಲ್ಲ. ಇಡೀ ರಾಜ್ಯದಲ್ಲಿ ಈ ಸಮಸ್ಯೆ ಇದೆ.

ಶ್ರೀ ಪಿ. ರಾಜೀವ್:– ಮಾನ್ಯ ಉಪಾಧ್ಯಕ್ಷರೆ, ಕಾಲೇಜಿನಲ್ಲಿ ಯಾವ ರೀತಿಯಾಗಿ carry over ಕೊಡುತ್ತಾರೆಯೋ ಅದೇ ರೀತಿಯಲ್ಲಿ ಹಾಸ್ಟೆಲ್‌ಗಳಲ್ಲಿಯೂ ಕೂಡ ಕೊಡಿ. ಅಲ್ಲೇಕೆ ಸಮಸ್ಯೆ ಮಾಡುತ್ತೀರಿ?

ಉಪಾಧ್ಯಕ್ಷರು:– ಮಾನ್ಯ ಮಂತ್ರಿಗಳು ಇಲ್ಲ. ನಾಳೆ ಉತ್ತರ ಕೊಡುತ್ತಾರೆ. ಮುಂದಿನ ಪ್ರಶ್ನೆ ಶ್ರೀ ಎಂ.ಟಿ. ಕೃಷ್ಣಪ್ಪನವರದ್ದು, ಅವರು ಇಲ್ಲ. ಮುಂದಿನ ಪ್ರಶ್ನೆ ಡಿ.ಎನ್. ಜೀವರಾಜ್‌ರವರದ್ದು.

5) ವಿಷಯ: ದಾಸ್ತಾನು ಮಾಡಿರುವ ಗೋಧಿಯಲ್ಲಿ ಹುಳುಗಳಿರುವ ಬಗ್ಗೆ.

ಶ್ರೀ ಡಿ.ಎನ್. ಜೀವರಾಜ್ (ಶೃಂಗೇರಿ):– ಮಾನ್ಯ ಉಪಾಧ್ಯಕ್ಷರೆ, ತಮಗೂ ಮತ್ತು ಮಾನ್ಯ ಕಾನೂನು ಸಚಿವರಿಗೆ ಆ ಒಂದು ವಿಡಿಯೋ ಕ್ಲಿಪಿಂಗ್ ಅನ್ನು ತೋರಿಸಿದ್ದೇನೆ. ಆಗಲೇ ಮಾನ್ಯ ಆಹಾರ ಇಲಾಖೆಯ ಸಚಿವರು ಇರಲಿಲ್ಲ. ವಿಷಯ ಏನೆಂದರೆ, ಗೋಧಿಯನ್ನು ನಾಲ್ಕು ತಿಂಗಳ ಮುಂಚೆಯೇ ತಂದು ಸ್ಟಾಕ್ ಮಾಡಿದ್ದಾರೆ. ಸ್ಟಾಕ್ ಇಟ್ಟಿರುವ ಗೋಧಿಯಲ್ಲಿ